# ಗರ್ಭ ಕ್ಯಾನ್ಸರ್ : ಚಿಂತೆ ಬೇಡ

**ಯುಟೆರಿನ್ ಕ್ಯಾನ್ಸರ್ (ಗರ್ಭದ ಕ್ಯಾನ್ಸರ್), ಮಹಿಳೆಯರ ಸಂತಾನೋತ್ಪತ್ತಿ ವ್ಯವಸ್ಥೆಯ ಕ್ಯಾನ್ಸರ್‌ಗಳ ಪೈಕಿ ಅತಿ ಸಾಮಾನ್ಯ ರೀತಿಯ ಕ್ಯಾನ್ಸರ್ ಆಗಿದೆ. ಸಾಮಾನ್ಯವಾಗಿ ಈ ಗರ್ಭದ ಕ್ಯಾನ್ಸರ್ 50 ವರ್ಷಗಳಿಗಿಂತ ಹೆಚ್ಚಿನ ವಯಸ್ಸಿನ ಮಹಿಳೆಯರಲ್ಲಿ, ಅಂದರೆ ಋತುಸ್ರಾವ ಮುಗಿದಿರುವಂತಹ ಮಹಿಳೆಯರಲ್ಲಿ ಕಾಣಿಸಿಕೊಳ್ಳುತ್ತದೆ. ಆದರೆ 25 ರಷ್ಟು ಪ್ರಕರಣಗಳು ಅಂತಿಮ ಋತುಸ್ರಾವಕ್ಕೂ ಮುಂಚೆಯೇ ಉಂಟಾಗುವ ಸಾಧ್ಯತೆಗಳಿರುತ್ತವೆ.**



**ಡಾ॥ ರಾಣಿ ಭಟ್**
ಗೈನಿಕ್ ಆನ್‌ಕಾಲಜಿ ತಜ್ಞರು
ಬಿಜಿಎಸ್ ಗ್ಲೋಬಲ್ ಹಾಸ್ಪಿಟಲ್ಸ್
– ಸೂಪರ್ ಸ್ಪೆಷಾಲಿಟಿ ಕ್ವಾಟರ್ನರಿ ಕೇರ್

**ಗರ್ಭದ ಕ್ಯಾನ್ಸರ್‌ಗೆ ಕಾರಣಗಳೇನು?**

- ನೀವು ಹೆಚ್ಚು ತೂಕವನ್ನು ಹೊಂದಿದ್ದಲ್ಲಿ ಅಥವಾ ಸ್ಥೂಲಕಾಯರಾಗಿದ್ದಲ್ಲಿ.
- ನೀವು 50 ವರ್ಷಕ್ಕಿಂತ ಹೆಚ್ಚು ವಯಸ್ಸಾಗಿದ್ದಲ್ಲಿ ಮತ್ತು ಅಂತಿಮ ಋತುಸ್ರಾವ ಮುಗಿದಿದ್ದಲ್ಲಿ ಅಥವಾ ಇಲ್ಲದಿದ್ದಲ್ಲಿ.
- ಎಂಡೊಮೆಟ್ರಿಯಂ (ಗರ್ಭಕೋಶದ ಒಳ ಪೊರೆ) ಹೆಚ್ಚು ದಪ್ಪವಾಗಿ ಬೆಳೆದಲ್ಲಿ (ಎಂಡೊಮೆಟ್ರಿಯಲ್ ಹೈಪರ್‌ಪ್ಲಾಸಿಯ ಎಂದು ಗುರುತಿಸಲ್ಪಡುವ ಪರಿಸ್ಥಿತಿ).
- ಕುಟುಂಬದಲ್ಲಿ ಒಬ್ಬ ಅಥವಾ ಹೆಚ್ಚಿನ ಸದಸ್ಯರಿಗೆ ಎಂಡೊಮೆಟ್ರಿಯಲ್, ಕರುಳು, ಸ್ತನ ಅಥವಾ ಅಂಡಾಶಯದ ಕ್ಯಾನ್ಸರ್ ಅಥವಾ ಲಿಂಚ್ ಸಿಂಡ್ರೋಮ್ (ವಂಶವಾರು ನಾನ್–ಪಾಲಿಪೊಸಿಸ್ ಕೊಲೊರೆಕ್ಟಲ್ ಕ್ಯಾನ್ಸರ್ –HNPC) ಇದ್ದಲ್ಲಿ.
- ಟ್ಯಾಮಾಕ್ಸಿಫೆನ್ ಔಷಧ ಸೇವಿಸುತ್ತಿದ್ದಲ್ಲಿ (ಸ್ತನ ಕ್ಯಾನ್ಸರ್ ಚಿಕಿತ್ಸೆಗೆ ಬಳಸುವ ಔಷಧ).
- ರಕ್ತದೊತ್ತಡ ಹಾಗೂ ಮಧುಮೇಹವಿದ್ದಲ್ಲಿ.
- ನೀವು ಬಂಜೆಯಾಗಿದ್ದಲ್ಲಿ.



- ನಿಮಗೆ ಪಾಲಿಸಿಸ್ಟಿಕ್ ಓವರಿ ಸಿಂಡ್ರೋಮ್ (ಪಿಸಿಒಎಸ್) ಇದ್ದಲ್ಲಿ.
- ಮತ್ತೊಂದು ಕ್ಯಾನ್ಸರ್ ಚಿಕಿತ್ಸೆಗಾಗಿ ಪೆಲ್ವಿಕ್ ವಿಕರಣ ಪಡೆದಿದ್ದಲ್ಲಿ.

ಎಂಡೊಮೆಟ್ರಿಯಲ್ ಕ್ಯಾನ್ಸರ್ ಪ್ರಕರಣಗಳು ಹೆಚ್ಚಾಗುತ್ತಿದೆ ಮತ್ತು ಇದಕ್ಕೆ ಮುಖ್ಯ ಕಾರಣ ಸ್ಥೂಲಕಾಯ ಅಥವಾ ಬೊಜ್ಜುತನ.

**ಎಂಡೊಮೆಟ್ರಿಯಲ್ ಕ್ಯಾನ್ಸರ್‌ನ ಲಕ್ಷಣಗಳೇನು?**

ಎಂಡೊಮೆಟ್ರಿಯಲ್ ಕ್ಯಾನ್ಸರ್‌ನ ಲಕ್ಷಣಗಳಲ್ಲಿ ಇವುಗಳು ಸೇರಿವೆ:

- ಋತುಸ್ರಾವ ಮುಗಿದ ನಂತರ ರಕ್ತ ಸ್ರಾವ.
- ಅಸಾಧಾರಣ ದೀರ್ಘಾವಧಿಯ ಋತುಕಾಲ ಮತ್ತು ನಿಮ್ಮ ಋತುಕಾಲದ ಅವಧಿಗಳ ನಡುವೆ ರಕ್ತಸ್ರಾವವಾಗುವುದು.
- ಯೋನಿಯಿಂದ ಅಸ್ವಾಭಾವಿಕ ರೀತಿಯಲ್ಲಿ ನೀರಿನ ರೂಪದ, ರಕ್ತ ಅಥವಾ ವಾಸನೆಯಿಂದ ಕೂಡಿರುವ ದ್ರವಸ್ರಾವ.
- ಹೊಟ್ಟೆ ನೋವು.
- ಶೌಚಾಲಯಕ್ಕೆ ಹೋದಾಗ ತೊಂದರೆ ಅಥವಾ ನೋವುಂಟಾಗುವುದು.

**ನನಗೆ ಗರ್ಭದ ಕ್ಯಾನ್ಸರ್ ಇದೆ ಎಂದು ಅನಿಸಿದಾಗ ನಾನು ಏನು ಮಾಡಬೇಕು?**

ಕೂಡಲೇ ಗರ್ಭಕೋಶದ ಕ್ಯಾನ್ಸರ್ ತಜ್ಞ ವೈದ್ಯರನ್ನು ಕಾಣಿರಿ. ಅವರು ತಪಾಸಣೆ ಮಾಡಿ, ನಿಮ್ಮ ರಕ್ತದ ಪರೀಕ್ಷೆಯನ್ನು ಮಾಡುತ್ತಾರೆ ಮತ್ತು ಗರ್ಭಕೋಶದ ಅಲ್ಟ್ರಾಸೌಂಡ್ ತಪಾಸಣೆ ಮಾಡುತ್ತಾರೆ. ಈ ತಪಾಸಣೆಯನ್ನು ದೃಢಪಡಿಸಲು ಗರ್ಭಕೋಶದ ಒಂದು ಪದರದ ಮಾದರಿಯಿಂದ ಬಯಾಪ್ಸಿ ಮಾಡುತ್ತಾರೆ. ಇದನ್ನು ಹೊರರೋಗಿ ಚಿಕಿತ್ಸೆಯಾಗಿ ಮಾಡಬಹುದು.

**ಗರ್ಭದ ಕ್ಯಾನ್ಸರ್‌ಗೆ ಹೇಗೆ ಚಿಕಿತ್ಸೆ ನೀಡಬಹುದು?**

ಕ್ಯಾನ್ಸರ್‌ನ ಹಂತ, ನಿಮ್ಮ ವಯಸ್ಸು, ಆರೋಗ್ಯ ಹಾಗೂ ವೈದ್ಯಕೀಯ ಚರಿತ್ರೆಗಳನ್ನು ಆಧರಿಸಿ ಚಿಕಿತ್ಸೆಯನ್ನು ನಿರ್ಧರಿಸಲಾಗುತ್ತದೆ. ಚಿಕಿತ್ಸೆಯ ಆಯ್ಕೆಗಳು ಈ ರೀತಿಯಿವೆ:

**ಚಿಕಿತ್ಸೆ:** ಆರಂಭಿಕ ಹಂತದ ಕ್ಯಾನ್ಸರ್ ಇರುವಂತಹ ಯುವ ರೋಗಿಗಳಲ್ಲಿ ಮತ್ತು ತಮ್ಮ ಗರ್ಭವನ್ನು ಉಳಿಸಿಕೊಳ್ಳಲು ಬಯಸುವಂತಹ ರೋಗಿಗಳಿಗೆ, ಅಧಿಕ ಪ್ರಮಾಣದ ಹಾರ್ಮೋನುಗಳನ್ನು ನೀಡುವ ಮೂಲಕ ಚಿಕಿತ್ಸೆ ನೀಡಬಹುದು ಮತ್ತು ಯುವ ರೋಗಿಗಳಲ್ಲಿ ಗರ್ಭ, ಸೆರ್ವಿಕ್ಸ್ (ಗರ್ಭಕಂಠ), ಮತ್ತು ಸಸ್ತನಿ ಅಂಡನಾಳಗಳನ್ನು (fallopian tubes) ತೆಗೆದು, ಮುಂಚಿತವಾಗಿ ಋತುಸ್ರಾವವನ್ನು ಹೊಂದಲು ಅಂಡಾಶಯಗಳನ್ನು ಮಾತ್ರ ಉಳಿಸಿಕೊಳ್ಳಲಾಗುತ್ತದೆ.

ಹಿರಿಯ ಮಹಿಳೆಯರಲ್ಲಿ ಅಥವಾ ಕ್ಯಾನ್ಸರ್ ದೇಹದ ಇತರೆ ಭಾಗಗಳಿಗೆ ಹರಡಿರುವಂತಹ ರೋಗಿಗಳಲ್ಲಿ, ಅಂಡಾಶಯಗಳು ಮತ್ತು ಕ್ಯಾನ್ಸರ್ ಉಂಟಾಗಿರುವಂತಹ ಇತರೆ ಭಾಗಗಳನ್ನೂ ಸಹ ತೆಗೆಯಬೇಕಾಗುತ್ತದೆ. ಶಸ್ತ್ರಚಿಕಿತ್ಸೆಯ ನಂತರ, ಅಂತಿಮ ವರದಿಯನ್ನು ಆಧರಿಸಿ, ರೇಡಿಯೋಥೆರಪಿ ಮತ್ತು ಕಿಮೋಥೆರಪಿ ನೀಡಬೇಕಾಗಬಹುದು.

**ಭರವಸೆಯ ಬೆಳಕು:**

**ಏಳು ವರ್ಷಗಳ ವೈವಾಹಿಕ ಜೀವನವನ್ನು ಪೂರೈಸಿರುವ ಮತ್ತು ಮಕ್ಕಳಲ್ಲಿದಿರುವಂತಹ 30 ವರ್ಷ ವಯಸ್ಸಿನ ಮಹಿಳೆಯೊಬ್ಬರು ಕಳೆದ 6 ತಿಂಗಳಿಂದ ಯೋನಿಯಲ್ಲಿ (ಪರ್‌ವಜೈನಾ) ಅನಿಯಮಿತ ರಕ್ತಸ್ರಾವದ ಸಮಸ್ಯೆಯನ್ನು ಎದುರಿಸುತ್ತಿದ್ದರು. ಈ ಮಹಿಳೆಯ ಸಮಸ್ಯೆಯನ್ನು ಗುರುತಿಸಲು ನಡೆಸಿದ ಬಯಾಪ್ಸಿಯು ಈಕೆಗೆ ಗರ್ಭದ ಕ್ಯಾನ್ಸರ್ ಇರುವುದನ್ನು ಸೂಚಿಸಿತು ಮತ್ತು ಕ್ಯಾನ್ಸರ್ ಈಕೆಯ ಗರ್ಭಕೋಶಕ್ಕೆ ಹರಡಿರುವುದನ್ನು ಸ್ಕ್ಯಾನಿಂಗ್ ವರದಿಯು ಖಾತ್ರಿಪಡಿಸಿತು.**

**ಇದರಿಂದಾಗಿ ಈಕೆಗೆ ಹಿಸ್ಟೀರೆಕ್ಟಮಿ ಶಸ್ತ್ರಚಿಕಿತ್ಸೆಯನ್ನು ನಡೆಸಿ, ನಾಳಗಳು ಹಾಗೂ ಅಂಡಾಶಯಗಳು ಮತ್ತು ಪೆಲ್ವಿಕ್ ಲಿಂಫ್‌ನೋಡ್ಸನ್ನು ತೆಗೆಯಲಾಯಿತು. ಅಂತಿಮ ತಪಾಸಣಾ ವರದಿಯು ಈಕೆ 1ಬಿ ಹಂತವನ್ನು ತಲುಪಿರುವುದನ್ನು ಪತ್ತೆಯಾಗಿತ್ತು. ಇದಕ್ಕಾಗಿ ಶಸ್ತ್ರಚಿಕಿತ್ಸೆ ನಡೆಸಲಾಯಿತು. ನಂತರ ಆಕೆಗೆ ವಿಕರಣ ಚಿಕಿತ್ಸೆಯನ್ನೂ ನೀಡಲಾಯಿತು. ಈ ಎಲ್ಲಾ ಚಿಕಿತ್ಸೆಗಳ ನಂತರ ಈಗ ರೋಗಿಯು ಉತ್ತಮ ರೀತಿಯಲ್ಲಿ ಗುಣಮುಖಳಾಗುತ್ತಿದ್ದು, ಈಗ ಕ್ಯಾನ್ಸರ್ ಮುಕ್ತರಾಗಿದ್ದಾರೆ.**

080 - 30 44 44 44 | infogh@globalhospitalsindia.com | globalhospitalsindia.com